<u>ಕರ್ನಾಟಕ ಸರ್ಕಾರ</u>

ನಂ.ಬಿ.ಡಿಸ್:ಎಎಲ್ಎನ್(ಎಸ್)ಎಸ್ಆರ್(ಕೆ.ಟಿ)136/04-05.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು ದಿನಾಂಕ: 9-5-2005.

<u>:ಅಧಿಕೃತ ಜ್ಞಾಪನ:</u>

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸ.ನಂ 28/17ಎ ರಲ್ಲಿನ 1-34 ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ.ದಾಸ್‌ಜಿಯಾಸಿಂಗ್ ಬಿನ್ ದಾಸ್,ನಂ.496,7ನೇ ಮುಖ್ಯರಸ್ತೆ,ಹೆಚ್.ಎ.ಎ.ಎಲ್.2ನೇ ಹಂತ,ಬೆಂಗಳೂರು-8 ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಸಲ್ಲಿಸಿರುವ ಅರ್ಜಿ ದಿ: 4-9-2004.

ಉಲ್ಲೇಖ:
1) ತಹಶೀಲ್ದಾರ್,ಬೆಂಗಳೂರು ದಕ್ಷಿಣ ತಾಲ್ಲೂಕು ರವರ ವರದಿ ಸಂ:ಎಎಲ್ಎನ್.ಎಸ್.ಆರ್:(ಕೆ) 147/2004-05 ದಿನಾಂಕ:. 23-4-2005.
2) ಈ ಕಛೇರಿ ಸಮ ಸಂಖ್ಯೆ ತಿಳುವಳಿಕೆ ಪತ್ರದ ದಿನಾಂಕ: 29-4-2005.
3) ಭೂ ಪರಿವರ್ತನಾ ಶುಲ್ಕ ರೂ. 1,00,733-00 0-01 ಗುಂಟೆ ಖರಾಬಿಗೆ ಶುಲ್ಕ ರೂ. 15,000-00 ಹಾಗೂ ಪೋಡಿ ಶುಲ್ಕ ರೂ 55-00 ಸೇರಿ ಒಟ್ಟು ರೂ 1,15,788-00 ಗಳನ್ನು ಚಲನ್.ನಂ: 14 ದಿನಾಂಕ: 30-4-2005 ರಂದು ಎಸ್.ಬಿ.ಎಂ.ಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

:: 0 ::

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95(2),95(4) ಮತ್ತು 95(7)ರರ ಷರತ್ತುಗಳು ಹಾಗೂ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ಎಕರೆ ಒಂದಕ್ಕೆ ರೂ. 54,450-00 (ರೂಪಾಯಿಗಳು ಐವತ್ನಾಲ್ಕು ಸಾವಿರದ ನಾಲ್ಕುನೂರಾ ಐವತ್ತು ಮಾತ್ರ.) ಗಳಂತೆ ಅರ್ಜಿದಾರರು ಉಲ್ಲೇಖ(3)ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಮೇಲ್ಕಂಡ ಅರ್ಜಿದಾರರಾದ, ಶ್ರೀ.ದಾಸ್‌ಜಿಯಾಸಿಂಗ್ ಬಿನ್ ದಾಸ್, ರವರ ಅರ್ಜಿಯನ್ನು ಪರಿಗಣಿಸಿ ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸ.ನಂ 28/17ಎ ರಲ್ಲಿನ 1-34 ಎಕರೆ/ಗುಂಟೆ, ( ಒಂದು ಎಕರೆ ಮೂವತ್ನಾಲ್ಕು ಗುಂಟೆ ವಿಸ್ತೀರ್ಣಕ್ಕೆ ಮಾತ್ರ ) ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1) ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಬಿ.ಎಂ.ಆರ್.ಡಿ.ಎ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2) ಈ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು

3) ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಬಿ.ಎಂ.ಆರ್.ಡಿ.ಎ ರವರಿಂದ ಅನುಮೊದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇ ಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4) ಇತರೆ ಅವಶ್ಯವಾದ ರಸ್ತೆ ಜಾಗ,ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಬಿ.ಎಂ.ಆರ್.ಡಿ.ಎ ಬೆಂಗಳೂರು ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ಧಿಷ್ಟ ಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5) ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿ ಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

6) ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ: ರಿಟ್ ಅರ್ಜಿ:ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ. ಪ್ರಶ್ನಿತ ಜಮೀನಿನ ಮೇಲೆ ಯಾವುದೇ ಭೂ ಸ್ವಾಧೀನ ನಡವಳಿಕೆಯೇನಾದರೂ ನಡೆಸಿದ್ದಲ್ಲಿ ಈಪ್ರಾಧಿಕಾರದ ಆದೇಶಕ್ಕೆ ಸಂಬಂಧವಿರುವುದಿಲ್ಲ. ಭೂ ಪರಿವರ್ತನೆ ಕೋರಿ ಸಲ್ಲಿಸಿರುವ ದಾಖಲೆಗಳು ಸುಳ್ಳು ಅಥವಾ ಮೋಸಕರವೆಂದು ಕಂಡು ಬಂದಲ್ಲಿ ಈ ಆದೇಶವು ತಂತಾನೇ ರದ್ದುಗೊಳ್ಳುತ್ತದೆ.

-2.

7) ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 67ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ 0-01 ಗುಂಟೆ ಖರಾಬ್ ಜಮೀನಿರುತ್ತದೆ. ಈ 0-01 ಗುಂಟೆ ಖರಾಬ್ ವಿಸ್ತೀರ್ಣದ ಜಮೀನಿಗೆ ಮಾರುಕಟ್ಟೆ ಬೆಲೆ ವಿಧಿಸಿ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆಗೊಳಿಸಿದೆ. ತಹಶೀಲ್ದಾರ್ ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8) ಸರ್ಕಾರಕ್ಕೆ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ: 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ ಪಿ 1:7(11) 67, ದಿನಾಂಕ: 1.1.1966 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9) ಈ ಭೂ ಪರಿವರ್ತಿತ ಜಮೀನಿನಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು.

ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ. 96ರಂತೆ ದಂಡ ಶುಲ್ಕವನ್ನು ವಿಧಿಸಲುಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೇದಾರರಿಂದ ವಸೂಲಿ ಮಾಡಲಾಗುವುದು.

<u>:: ಷೆಡ್ಯೂಲ್ ವಿವರ ::</u>

ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸ.ನಂ 28/17ಎ ರಲ್ಲಿನ 1-34 ಎಕರೆ/ಗುಂಟೆ ( ಒಂದು ಎಕರೆ ಮೂವತ್ನಾಲ್ಕು ಗುಂಟೆ ಮಾತ್ರ) ವಿಸ್ತೀರ್ಣದ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ.

| | |
|---|---|
| ಪೂರ್ವಕ್ಕೆ | ಶ್ರೀ.ಈರನರಸಪ್ಪ, ಶ್ರೀಮತಿ.ಚನ್ನಮ್ಮ ಮತ್ತು ಇತರರ ತೋಟ |
| ಪಶ್ಚಿಮಕ್ಕೆ | ಖಾಸಗಿ ಸ್ವತ್ತು |
| ಉತ್ತರಕ್ಕೆ | ಶ್ರೀ.ನರಸಿಂಹಯ್ಯ ಮತ್ತು ಶ್ರೀ. ದಾಸಪ್ಪನವರ ಜಮೀನು |
| ದಕ್ಷಿಣಕ್ಕೆ | ಕುಂಬಳಗೋಡು ಹಾಗೂ ಕನಕಪುರಕ್ಕೆ ಸೇರುವ ರಸ್ತೆ. |

ಜಿಲ್ಲಾಧಿಕಾರಿಗಳ ಕಛೇರಿ ಬೆಂಗಳೂರು ಜಿಲ್ಲೆ

ಸಹಿ/-
( ಡಾ.ರಾಮೇಗೌಡ )
ವಿಶೇಷ ಜಿಲ್ಲಾಧಿಕಾರಿ(ಕಂ)
ಬೆಂಗಳೂರು ಜಿಲ್ಲೆ.

<u>ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:-</u>

1) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ರವರಿಗೆ ಮೂಲ ಕಡತ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ತಕ್ಷಣ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಬಿ.ಎಂ.ಆರ್.ಡಿ.ಎ. ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3) ಉಪ ವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು .
4) ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ ಬೆಂಗಳೂರು
5) ಅರ್ಜಿದಾರರಾದ, ಶ್ರೀ.ದಾಸ್‌ಜಿಯಾಸಿಂಗ್ ಬಿನ್ ದಾಸ್,ನಂ.496,7ನೇ ಮುಖ್ಯರಸ್ತೆ,ಹೆಚ್.ಎ.ಎಲ್.2ನೇ ಹಂತ,ಬೆಂಗಳೂರು-8 ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ (ದೃಢೀಕೃತ ಅಂಚೆ ಮೂಲಕ ಕಳುಹಿಸಿದೆ).
6) ಹೆಚ್ಚಿನ ಪ್ರತಿ.

ವಿಶೇಷ ಜಿಲ್ಲಾಧಿಕಾರಿ(ಕಂ)
ಬೆಂಗಳೂರು ಜಿಲ್ಲೆ

## ಕರ್ನಾಟಕ ಸರ್ಕಾರ

ನಂ: ಎಎಲ್‌ಎನ್(ಎಸ್)ಎಸ್‌ಆರ್/(ಕೆಂ.)/07/17-18

ನಂ: ಎಎಲ್‌ಎನ್(ಎಸ್)ಎಸ್‌ಆರ್/(ಕೆ.ಟಿ.)/136/04-05

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ಜಿಲ್ಲೆ
ಬೆಂಗಳೂರು, ದಿನಾಂಕ: 22-06-2017

:: ತಿದ್ದುಪಡಿ ಅಧಿಕೃತ ಜ್ಞಾಪನ ::

ವಿಷಯ:- ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸ.ನಂ. 28/17ಎ ರಲ್ಲಿ 1-34 ಎಕರೆ/ಗುಂಟೆ ವಿಸ್ತೀರ್ಣದ ಜಮೀನು **ವಾಸದ** ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು, ಸದರಿ ಆದೇಶದಲ್ಲಿನ ಚೆಕ್ಕುಬಂದಿ ವ್ಯತ್ಯಾಸವಾಗಿದ್ದು, ಚೆಕ್ಕುಬಂದಿಯನ್ನು ತಿದ್ದುಪಡಿ ಮಾಡಿಕೊಡುವಂತೆ ಕೋರಿರುವ ಬಗ್ಗೆ.

ಉಲ್ಲೇಖ:- 1) ಈ ಕಛೇರಿ ಸಮಸಂಖ್ಯೆ ಅಧಿಕೃತ ಜ್ಞಾಪನ ಪತ್ರ ದಿನಾಂಕ: 09-05-2005
2) ಅರ್ಜಿದಾರರಾದ ಶ್ರೀ ದಾಸ್‌ಜಯಸಿಂಗ್ ಬಿನ್ ದಾಸ್, ನಂ. 496, 7ನೇ ಮೈನ್, ಹೆಚ್.ಎ.ಎಲ್. 2ನೇ ಹಂತ, ಬೆಂಗಳೂರು ರವರ ಮನವಿ ದಿ: 24-03-2017
3) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ರವರ ಪತ್ರ ಸಂ: ಎಎಲ್‌ಎನ್/ಎಸ್‌ಆರ್/(ಕೆ)/147/04-05, ದಿ: 29-05-2017.

****

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ದಾಸ್‌ಜಯಸಿಂಗ್ ಬಿನ್ ದಾಸ್ ರವರು ಉಲ್ಲೇಖ(2)ರಂತೆ ಮನವಿ ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸ.ನಂ. 28/17ಎ ರಲ್ಲಿ 1-34 ಎಕರೆ/ಗುಂಟೆ ವಿಸ್ತೀರ್ಣದ ಜಮೀನಿಗೆ **ವಾಸದ** ಉದ್ದೇಶಕ್ಕೆ ಉಲ್ಲೇಖ(1)ರಂತೆ ಈ ಕಾರ್ಯಾಲಯದಿಂದ ದಿ: 09-05-2005 ರಂದು ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿದ್ದು, ಸದರಿ ಅಧಿಕೃತ ಜ್ಞಾಪನ ಪತ್ರದಲ್ಲಿನ ಚೆಕ್ಕುಬಂದಿ ವ್ಯತ್ಯಾಸವಾಗಿದ್ದು, ಸದರಿ ಚೆಕ್ಕುಬಂದಿಯನ್ನು ತಿದ್ದುಪಡಿ ಮಾಡಿಕೊಡಲು ಕೋರಿರುತ್ತಾರೆ.

ಅರ್ಜಿದಾರರು ಕೋರಿರುವಂತೆ ಸದರಿ ಸರ್ವೆ ನಂಬರುಗಳ ಚೆಕ್ಕುಬಂದಿ ಬಗ್ಗೆ ಪರಿಶೀಲಿಸಿ, ವರದಿ ಮಾಡಲು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಸೂಚಿಸಲಾಗಿದ್ದು, ಅಂತೆಯೇ ತಾಲ್ಲೂಕು ಮೋಜಿಣಿದಾರರು ತಿದ್ದುಪಡಿ ಮಾಡಿ ನೀಡಿರುವ ಸರ್ವೆ ಸ್ಕೆಚ್‌ನೊಂದಿಗೆ, ತಹಸೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಉಲ್ಲೇಖ(3)ರಂತೆ ವರದಿ ನೀಡಿರುವ ಮೇರೆಗೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗ್ರಾಮದ ಸ.ನಂ. 28/17ಎ ರಲ್ಲಿ 1-34 ಎಕರೆ/ಗುಂಟೆ ವಿಸ್ತೀರ್ಣದ ಜಮೀನಿನ ಉಲ್ಲೇಖ(1)ರ ಭೂ ಪರಿವರ್ತನೆ ಆದೇಶದಲ್ಲಿನ ಚೆಕ್ಕುಬಂದಿಯನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

| | |
|---|---|
| ಪೂರ್ವಕ್ಕೆ | ಈನರಸಪ್ಪ, ಚನ್ನಮ್ಮ ಮತ್ತು ದಾಸಪ್ಪನವರ ಸ್ವತ್ತು |
| ಪಶ್ಚಿಮಕ್ಕೆ | ರಸ್ತೆ |
| ಉತ್ತರಕ್ಕೆ | ನರಸಿಂಹಯ್ಯ ಮತ್ತು ದಾಸಪ್ಪನವರ ಸ್ವತ್ತು |
| ದಕ್ಷಿಣಕ್ಕೆ | ಖಾಸಗಿ ಸ್ವತ್ತು |

ಉಳಿದಂತೆ ಉಲ್ಲೇಖ (1) ರ ಈ ಕಾರ್ಯಾಲಯದ ಅಧಿಕೃತ ಜ್ಞಾಪನ ಪತ್ರದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹಾಗೂ ಈ ಆದೇಶವು ಕೇವಲ ಚೆಕ್ಕುಬಂದಿ ತಿದ್ದುಪಡಿ ಆದೇಶ ಮಾತ್ರ ಆಗಿರುತ್ತದೆ.

ಸಹಿ/-
(ವಿ. ಶಂಕರ್)
ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ, ಬೆಂಗಳೂರು

ಪ್ರತಿಯನ್ನು:-

1) ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುಂಬಳಗೋಡು ಗ್ರಾಮ ಪಂಚಾಯಿತಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಮಾಹಿತಿಗಾಗಿ
3) ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಬೆಂಗಳೂರು ರವರಿಗೆ.
4) ಶ್ರೀ ದಾಸ್‌ಜಯಸಿಂಗ್ ಬಿನ್ ದಾಸ್, ನಂ. 496, 7ನೇ ಮೈನ್, ಹೆಚ್.ಎ.ಎಲ್. 2ನೇ ಹಂತ, ಬೆಂಗಳೂರು ರವರಿಗೆ

ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ, ಬೆಂಗಳೂರು